


International Journal of Kannada Research
www.kannadajournal.com

ISSN: 2454–5813
IJKR 2025; 11(1): 93-96
© 2025 IJKR
www.kannadajournal.com
Received: 22-11-2024
Accepted: 26-12-2024

**ಡಾ. ಶಿವಾನಂದ ಎಂ. ಹಂಚಿನಾಳ**
ಸಹ ಪ್ರಾಧ್ಯಾಪಕರು, NHCK
ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ಶಿವಾನಂದ ಎಂ. ಹಂಚಿನಾಳ**
ಸಹ ಪ್ರಾಧ್ಯಾಪಕರು, NHCK
ಬೆಂಗಳೂರು, ಕರ್ನಾಟಕ, ಭಾರತ

# ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಪರಿವರ್ತನೆ: ಸಮಕಾಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮೌಢ್ಯತೆ, ಅಜ್ಞಾನ, ಅಪನಂಬಿಕೆ, ಅನುಲಕ್ಷಿಸಿ

**ಡಾ. ಶಿವಾನಂದ ಎಂ. ಹಂಚಿನಾಳ**

**ಪೀಠಿಕೆ**

12ನೇ ಶತಮಾನ ಸಾಮಾಜಿಕ ದೃಷ್ಟಿಯಿಂದ ಭಾರತೀಯ ಹಾಗೂ ಜಾಗತಿಕ ಮಟ್ಟದಲ್ಲಿ ಮಹತ್ವದ ಘಟ್ಟವೆನಿಸಿಕೊಂಡಿದೆ. ಕಾರಣ ಸಮಾಜದಲ್ಲಿ ಉಂಟು ಮಾಡಿದ ಕ್ರಾಂತಿ, ಬದಲಾವಣೆ, ಮಾನವೀಯ ಮೌಲ್ಯಗಳ ಬಿತ್ತನೆ ಮಾನವ ಪ್ರೇಮವನ್ನು ಪ್ರಚಾರಗೊಳಿಸಿದ್ದಕ್ಕಾಗಿ, ಸಮಕಾಲಿನ ಸಮಾಜದಲ್ಲಿ ಹರಡಿಕೊಂಡಿದ್ದ ಸಾಮಾಜಿಕ ಅಸಮಾನತೆ, ಮೂಢನಂಬಿಕೆ ಧಾರ್ಮಿಕ ಕಂದಾಚಾರ, ಮುಂತಾದವುಗಳ ವಿರುದ್ಧ ಹೋರಾಡುವುದು ಜನಸಮುದಾಯಗಳಲ್ಲಿ ಅರಿವು ಮೂಡಿಸುವುದು, ಸಮಸಮಾಜ ನಿರ್ಮಾಣ ಮಾಡುವುದು ವಚನ ಚಳುವಳಿಯ ಬಹುಮುಖ್ಯ ಉದ್ದೇಶವಾಗಿತ್ತು. ಆ ಕಾರಣದಿಂದ ಬಸವಣ್ಣನವರ ನೇತೃತ್ವದಲ್ಲಿ ಚಳುವಳಿಯ ರೂಪದಲ್ಲಿ ಹೋರಾಟವನ್ನೇ ಮಾಡಿದರು. ವಚನಕಾರರು ಆಯ್ಕೆ ಮಾಡಿಕೊಂಡ ಮಾರ್ಗವೆಂದರೆ ವಚನಗಳ ಹಾಗೂ ಜನಸಾಮಾನ್ಯರ ಆಡುಮಾತುಗಳಲ್ಲಿ ಜನರನ್ನು ತಲುಪುವ ಕೆಲಸವನ್ನು ಮಾಡಿದರು.

ನಾನು ಚರ್ಚೆ ಮಾಡಲು ಹೊರಟ ವಿಷಯವೇನೆಂದರೆ, ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಪರಿವರ್ತನೆಗೆ ಸಂಬಂಧಿಸಿದಂತೆ, ಅವರ ಒಟ್ಟು ವಚನಗಳಲ್ಲಿ ಬಹುತೇಕ ವಚನಗಳು ಸಾಮಾಜಿಕ ಪರಿವರ್ತನೆಗೆ ಸಂಬಂಧಿಸಿದವುಗಳಾಗಿವೆ. ಸಾಮಾಜಿಕ ಬದಲಾವಣೆ ಅಥವಾ ಪರಿವರ್ತನೆ ಎಂದರೆ ಸಮಕಾಲಿನ ಸಮಾಜದಲ್ಲಿ ಚಲಾವಣೆಯಲ್ಲಿರುವ ಜಾತಿ ಪದ್ಧತಿ, ಕಸಬುಗಾರಿಕೆ, ಸ್ತ್ರೀಯರ ಕುರಿತು ಅಪನಂಬಿಕೆ, ಇನ್ನು ಪೂರಕ ಆಚರಣೆಗಳು, ಇವುಗಳ ನಿರ್ಮೂಲನೆ ಹಾಗೂ ಪರಿವರ್ತನೆ ಮಾಡಲು ಬಸವಾದಿ ಶರಣರು ತಮ್ಮ ವಚನಗಳ ಮೂಲಕ ಸಾಮಾಜಿಕ ಪರಿವರ್ತನೆಯುಂಟು ಮಾಡಲು ಆರಂಭಿಸಿದರು. ಎಲ್ಲಾ ವಚನಕಾರರ ವಚನಗಳಲ್ಲಿ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಜ್ಞಾನವನ್ನು ಕುರಿತು ರಚನೆಗೊಂಡಿವೆ.

ಬಸವಣ್ಣನವರ ವಚನಗಳಲ್ಲಿ ಮೌಢ್ಯತೆ, ಅಂಧಕಾರ ಕುರಿತು ಅವುಗಳನ್ನು ಖಂಡನೆ ಮಾಡುವುದು, ಜನರಲ್ಲಿ ಅರಿವು ಮೂಡಿಸುವುದು, ಮುಗ್ದ ಜನರು ಅಜ್ಞಾನದಿಂದ ಮೋಸ ಹೋಗುವದನ್ನು ತಪ್ಪಿಸುವುದಾಗಿದೆ.

> "ಏನಯ್ಯಾ, ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ
> ತಮಗೊಂದು ಬಟ್ಟೆ, ಶಾಸ್ತ್ರಕೊಂದು ಬಟ್ಟೆ !
> ಕೂಡಲಸಂಗಮದೇವಯ್ಯಾ ಹೊಲೆಯರ ಬಸುರಲಿ
> ವಿಪ್ರರು ಹುಟ್ಟಿ ಗೋಮಾಂಸವೆ ತಿಂಬರೆಂಬುದಕ್ಕೆ ಇದೆ ದೃಷ್ಟ"[1]

ಶಾಸ್ತ್ರಗಳಲ್ಲಿ ಉಪನಿಷತ್ತು, ಗೀತೆ ಮುಂತಾದವುಗಳಲ್ಲಿ ಅತ್ಯಂತ ಶ್ರೇಷ್ಠವಾದ ತತ್ವಗಳನ್ನು ಹೇಳುವವರು. ಆಚರಣೆಯಲ್ಲಿ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವವರನ್ನು ಕಂಡು ಬಸವಣ್ಣನವರು ಈ ಉದ್ಗಾರವನ್ನು ತೆಗೆದಿದ್ದಾರೆ. ನುಡಿದಂತೆ ಇವರು ನಡೆಯುವುದಿಲ್ಲ ಎಂಬ ಚಿಂತೆ ಅವರದು. ಶಾಸ್ತ್ರ ಹೇಳುವವರ ಜೀವನ ಮಾರ್ಗವೇ ಬೇರೆ. ಶಾಸ್ತ್ರದಲ್ಲಿ ಹೇಳುವ ಮಾರ್ಗವೇ ಬೇರೆ. ಯಜ್ಞದ ನೆಪದಿಂದ ಗೋಮಾಂಸವನ್ನು ತಿನ್ನುವ ಈ ಜನ ಇವರು ನಿಜವಾಗಿ ಹೊಲೆಯರಲ್ಲಿ ಹುಟ್ಟಿದವರು. ನುಡಿದಂತೆ ನಡೆಯದಿದ್ದವರೇ ಹೊಲೆಯರು ಎಂದು ಕಟುವಾಗಿ ವಿರೋಧಿಸುತ್ತಾರೆ.

ಸಮಾಜದಲ್ಲಿ ಇದ್ದ ಧಾರ್ಮಿಕ ಭ್ರಷ್ಟಾಚಾರವನ್ನು ವಿರೋಧಿಸುವ ಹಾಗೂ ಜನರಿಗೆ ಸತ್ಯವನ್ನು ತಿಳಿಸುವ ಕಾರ್ಯ ಬಸವಣ್ಣನವರ ವಚನಗಳಲ್ಲಿ ಕಂಡು ಬರುತ್ತದೆ. ವಚನಕಾರರ ಮುಖ್ಯ ಧ್ಯೇಯ ಅಹಿಂಸೆಯಾಗಿತ್ತು. ಅವರ ಮಾತು, ವಚನಗಳಲ್ಲಿ ಕಂಡುಬರುವ ಸತ್ಯ ಸಂಗತಿ. ಪ್ರಾಣಿವಧೆಯನ್ನು ಕಟು ಶಬ್ದಗಳಲ್ಲಿ ವಿರೋಧಿಸುವ ವಚನವನ್ನು ನೋಡಬಹುದು.

"ನಿಮ್ಮ ವಚನವೆನ್ನ ಪುಣ್ಯವೆಂಬುದು ಹಸಿವಾಯಿತ್ತು ನೋಡಾ
ಶಾಸ್ತ್ರದ ವಚನ ಹೋಲೆಂಗೆ ಮಾರಿ;
ಎಂತು ನಂಬುವೆನಯ್ಯಾ ?
ನಾನು ಕೊಲ್ಲೆ, ನೇಣು ಕೊಂದಿತ್ತೆಂಬ ಸೂನೆಗಾರರನೇನೆಂಬೆ,
ಕೂಡಲಸಂಗಮದೇವಾ? [2]

ವೇದಶಾಸ್ತ್ರಗಳಲ್ಲಿ ಹೇಳಿರುವ ಹಿಂಸಾಚಾರದ ಮಾರ್ಗವನ್ನು ಬಸವಣ್ಣನವರು ಈ ವಚನದ ಮೂಲಕ ಕಟುವಾಗಿ ಖಂಡಿಸುತ್ತಾರೆ. ಯಜ್ಞ ಯಾಗಾದಿಗಳಲ್ಲಿ, ಪ್ರಾಣಿವಧೆ ಮಾಡುವವರನ್ನು ಕಟುಕರು ಎಂದು ಕರೆಯುತ್ತಾರೆ. ವೇದಶಾಸ್ತ್ರಗಳಲ್ಲಿ ಹೇಳಿರುವುದರಿಂದ ಇದನ್ನು ನಾವು ಮಾಡುತ್ತೇವೆ ಎಂದು ಸಮರ್ಥಿಸಿಕೊಳ್ಳುವವರನ್ನು ಕೊಲ್ಲುವವನು ನಾನಲ್ಲ, ಕೊರಳಿಗೆ ಬಿಗಿದ ಹಗ್ಗ ಎಂಬಂತಹ ಬುದ್ಧಿವಂತಿಕೆಯನ್ನು ವಿಡಂಬಿಸುತ್ತಾರೆ. ವೇದ ಶಾಸ್ತ್ರಗಳ ಆ ಭಾಗವನ್ನು ಧೈರ್ಯದಿಂದ ನಿರಾಕರಿಸುತ್ತಾರೆ. ಅಹಿಂಸಾನಿಷ್ಠೆ ಬಸವಣ್ಣನವರ ಸತ್ಯಮಾರ್ಗ ಒಂದು ವ್ರತವಾಗಿ ಪರಿಣಮಿಸಿತು. ಇದರಿಂದ ಸಮಾಜದಲ್ಲಿ ಪರಿವರ್ತನೆ ಉಂಟಾಗಲು ಕಾರಣವಾಯಿತು. ಧಾರ್ಮಿಕ ಕಂದಾಚಾರಗಳಲ್ಲಿ ಬದಲಾವಣೆಯನ್ನು ತರುವುದರ ಮೂಲಕ ಜಾತಿ ವ್ಯವಸ್ಥೆಯ ಬುಡಕ್ಕೆ ಪೆಟ್ಟು ನೀಡಿದರು.

"ಹೊಲೆಯೊಳಗೆ ಹುಟ್ಟಿ ಕುಲವನರಿಸುವೆ,
ಎಲವೊ ಮಾತಂಗಿಯ ಮಗ ನೀನು !
ಸತ್ತುದನೆಳೆವನೆತ್ತಣ ಹೊಲೆಯ ?
ಹೊತ್ತು ತಂದು ನೀವು ಕೊಲ್ಲುವಿರಿ
ಶಾಸ್ತ್ರವೆಂಬುದು ಹೋತಿಂಗೆ ಮಾರಿ
ವೇದವೆಂಬುದು ನಿಮಗೆ ತಿಳಿಯದು
ನಮ್ಮ ಕೂಡಲಸಂಗನ ಶರಣರು
ಕರ್ಮವಿರಹಿತರು ಶರಣ ಸನ್ನಿಹಿತರು ಅನುಪಮಚರಿತ್ರರು
ಅವರಿಗೆ ತೋರಲು ಪ್ರತಿಯಿಲ್ಲವೊ!"[3]

ವೇದಶಾಸ್ತ್ರ, ಪುರಾಣಾದಿಗಳ ಹೆಸರಿನಲ್ಲಿಯೇ ಜಾತಿ, ಮತ ಕುಲಗಳನ್ನು ನಿರ್ಮಿಸಿಕೊಂಡು ಸಾಮಾಜಿಕ ವಿಷಮತೆಗೆ ಕಾರಣವಾಗಿರುವುದನ್ನು ಕಂಡು ಬಸವಣ್ಣನವರು ಕೆರಳಿದರು. ಎಲ್ಲ ಜಾತಿ ಮತಗಳನ್ನು ತೊಡೆದು ಸರ್ವ ಸಮಾನತೆಯ ಆಧಾರದ ಮೇಲೆ ಸಮಾಜವನ್ನು ನಿರ್ಮಿಸುವ ಸಾಹಸದಲ್ಲಿ ಬಸವಣ್ಣನವರಷ್ಟು ಮುಂದೆ ಹೋದವರನ್ನು ಭಾರತದ ಇತಿಹಾಸದಲ್ಲಿ ಅಪರೂಪದ ಪ್ರಯತ್ನ. ಜಾತಿ ಕುಲಗಳ ನಿರಾಕರಣೆಯ ದಿಟ್ಟತನವನ್ನು ಈ ವಚನದಲ್ಲಿ ಕಾಣಬಹುದು. ಹುಟ್ಟುವಾಗ ಎಲ್ಲರೂ ಹೊಲೆಯಲ್ಲಿಯೇ ಹುಟ್ಟುವುದು. ಅನಂತರ ತಾವು ಶ್ರೇಷ್ಠ ಅವರು ಕೀಳು ಇತ್ಯಾದಿ ಭಾವನೆಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಅಂತಹವರನ್ನು ಕಂಡು ಇಲ್ಲಿ ವಿಡಂಬಿಸುತ್ತಾರೆ. ಸತ್ತ ಪ್ರಾಣಿಗಳನ್ನು ಎತ್ತಿ ಹಾಕುವ ಒಂದು ಜನಾಂಗವನ್ನು ಸಮಾಜದಿಂದ ದೂರ, ಊರ ಹೊರಗ ಅಸ್ಪೃಶ್ಯರನ್ನಾಗಿ ಇಡಲಾಗಿದೆ. ಆದರೆ ಈ ಜಾತಿಗಳು ಹುಟ್ಟಿನಿಂದ ಬರುವುದಿಲ್ಲ. ಗುಣದಿಂದ ಬರುತ್ತವೆ. ಹೋತನನ್ನು ಹೊತ್ತು ತಂದು ಯಜ್ಞದಲ್ಲಿ ಕೊಲ್ಲುವವರು ಹೊಲೆಯರು; ಸತ್ತುದನ್ನು ಎತ್ತಿ ಹೊರುವವರಲ್ಲ. ನಿಮ್ಮ ಶಾಸ್ತ್ರ ಹೋತಿಗೆ ಮಾರಿ; ವೇದದ ಅರ್ಥವನ್ನು ನೀವು ಸರಿಯಾಗಿ ತಿಳಿದಿಲ್ಲ ಎಂದು ಉತ್ತಮರನ್ನು ಎಚ್ಚರಿಸುತ್ತಾರೆ.

"ಮಿಂಬಲಿಗನ ಹಕ್ಕಿಯಂತೆ ನೀರ ತಡಿಯಲಿದ್ದು
ಮೂಗ ಹಿಡಿದು ಧ್ಯಾನವ ಮಾಡುವರಯ್ಯಾ;
ಬಿಟ್ಟ ಮಂಡೆವೆರಿಸಿ ಬಾಯ ಮಿಡುಕಿಸುತ
ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯಾ
ನಿಮ್ಮ ಕೈಯಲ್ಲಿ ಕಟ್ಟಿದ ದರ್ಭೆಯಹುಲ್ಲು
ಕೂಡಲಸಂಗನರಿಯದೆ ಮೊರೆಯಿಡುವಂತೆ !"[4]

ಉತ್ತಮರೆನಿಸಿಕೊಂಡವರು ಧರ್ಮದ ಹೆಸರಿನಲ್ಲಿ ಮಾಡುವ ತೋರಿಕೆಯ ಆಚಾರ ವಿಚಾರಗಳನ್ನು ಬೂಟಾಟಿಕೆಯ ಕಪಟ ವರ್ತನೆಯನ್ನು ಕಟುವಾಗಿ ವಿಡಂಬಿಸುತ್ತಾರೆ. ನದಿಯ ದಡದಲ್ಲಿ ಬಕಪಕ್ಷಿ ಮೀನು ಹಿಡಿಯುವುದಕ್ಕಾಗಿ ಕಪಟ ಧ್ಯಾನದಲ್ಲಿ ತೊಡಗಿದಂತೆ ಮೂಗನ್ನು ಹಿಡಿದು ಇವರು ಧ್ಯಾನ ಮಾಡುತ್ತಾರೆ. ಕೆದರಿದ ತಲೆ, ಬಿಟ್ಟ, ಬಾಯಿಂದ ಪಿಟಿಪಿಟಿ ಎನ್ನುತ್ತಾ ಕಣ್ಣು ಮುಚ್ಚಿ ಬೆರಳನ್ನೆಣಿಸುತ್ತಾ ಧ್ಯಾನದಲ್ಲಿರುವಂತೆ ತೋರುತ್ತಾರೆ. ಅವರ ಕೈಯಲ್ಲಿರುವ ದರ್ಭೆಯ ಹುಲ್ಲು ಕೂಡಲಸಂಗನನ್ನರಿಯದೆ ಮೊರೆಯಿಡುತ್ತಿರುವ ಅವರ ಆರ್ತಸ್ಥಿತಿಗೆ ಸಾಕ್ಷಿ ಎಂಬಂತೆ ಕಾಣುತ್ತದೆ. ಶಿವಶರಣರು ಮಾಡುವ ಆಡಂಬರದ ಆಚಾರಗಳೆಲ್ಲಾ ವ್ಯರ್ಥವೆಂಬುದನ್ನು ಇಲ್ಲಿ ಎತ್ತಿ ಹೇಳುತ್ತಿದ್ದಾರೆ. ದೇವರು ಯಾವಾಗಲೂ ಸರಳತೆಯನ್ನು ಬಯಸುತ್ತಾನೆ ಎನ್ನುವುದು ಬಸವಣ್ಣನವರ ಧೋರಣೆಯಾಗಿದೆ. ಇದರಿಂದ ಜನಸಾಮಾನ್ಯರಿಗೂ ಅನುಕೂಲವಾಗುತ್ತದೆ. ಧಾರ್ಮಿಕ ಆಚರಣೆ ಎಲ್ಲರಿಗೂ ಲಭ್ಯವಾಗುತ್ತದೆ. ಇದರಿಂದ ಸಾಮಾಜಿಕ, ಧಾರ್ಮಿಕ ಸಮಾನತೆಯನ್ನು ಪಡೆಯಲು ಸಾಧ್ಯವಾಗುತ್ತದೆ.
ಮುಂದಿನ ವಚನದಲ್ಲಿ ಸಾಮಾಜಿಕ ಅಸಮಾನತೆಯನ್ನು ಕುರಿತು ಜಾತಿ ವ್ಯವಸ್ಥೆಯನ್ನು ಕುರಿತು, ಮೇಲು ಕೀಳು ಕುರಿತು ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಳಿಸುತ್ತಾರೆ.

"ವ್ಯಾಸ ಬೋಯಿತಿಯ ಮಗ, ಮಾರ್ಕಂಡೆಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು !
ಕುಲವನರಸದಿರಿಂ ಬೋ ಕುಲದಿಂದ ಮುನ್ನೇನಾದಿರಿಂ ಬೋ?
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮುಚ್ಚಿಗ, ಕಶ್ಯಪಕಮ್ಮಾರ
ಕೌಂಡಿನ್ಯನೆಂಬ ಋಷಿ ಮೂರು ಭುವನವನರಿಯೆ ನಾವಿದ
ಕಾಣಿ ಬೋ!
ನಮ್ಮ ಕೂಡಲಸಂಗನ ವಚನವಿಂತೆಂದುದು;
ಶ್ವಪಚೋಪಿಯಾದಡೇನು, ಶಿವ ಭಕ್ತನೆ ಕುಲಜಂ ಬೋ"[5]

ಈ ಹಿಂದೆ ಭರತ ಖಂಡದಲ್ಲಿ ಪ್ರಸಿದ್ಧರಾಗಿ ಮಹತ್ಕಾರ್ಯವನ್ನು ಸಾಧಿಸಿದ ಋಷಿ ಮುನಿಗಳೆಲ್ಲ ಜನಸಿದ್ದು ಉತ್ತಮ ಕುಲದಲ್ಲೇನೂ ಅಲ್ಲ. ವ್ಯಾಸ ಋಷಿಯು ಬೋಯಿತಿಯ (ಬೇಸ್ತರವಳ) ಮಗ. ಮಾರ್ಕಂಡೆಯ ಮಾತಂಗಿಯ ಮಗ, ಅಂತೆಯೇ ಇನ್ನೂ ಕೆಲವರು ಬೇಡರು, ಚಮ್ಮಾರರು, ಕಮ್ಮಾರರು, ಕ್ಷೌರಿಕರು, ಈ ಮೊದಲಾದ ಕೀಳೆನ್ನುವ ಜಾತಿಗಳಲ್ಲಿ ಹುಟ್ಟಿದವರು. ಆದರೆ ತಮ್ಮ ಯೋಗ್ಯತೆಯಿಂದ ಶಿವಭಕ್ತಿ ನಿಷ್ಠೆಯಿಂದ ಮಹಾಮಹಿಮರಾದವರು. ಹುಟ್ಟಿನಿಂದ ಶ್ರೇಷ್ಠತೆ ಬರುವುದಿಲ್ಲ. ಸಾಧನೆಯಿಂದ ಅದು ಲಭಿಸುತ್ತದೆಂಬುದನ್ನು ಮನದಟ್ಟು ಮಾಡಿಕೊಡಲು

ಪ್ರಯತ್ನಿಸುತ್ತಿದ್ದಾರೆ. ಶ್ವಪಚ (ಚಾಂಡಾಲ)ನಾದರೇನು ಶಿವಭಕ್ತನೇ ಕುಲಜನು." ಎಂಬ ಆಗಮೋಕ್ತಿಯನ್ನು ಉದಾಹರಿಸಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಜಾತಿ ಮತ ಕುಲಗಳ ತಾರತಮ್ಯಗಳನ್ನು ನಿರಾಕರಿಸಿ ಸರ್ವಸಮಾನತೆಯ ಆಧಾರದ ಮೇಲೆ ಸಮಾಜವನ್ನು ಕಟ್ಟುವ ಮಹಾಮಣಿಹಕ್ಕೆ ತಮ್ಮನ್ನು ಅರ್ಪಿಸಿಕೊಂಡ ಬಸವಣ್ಣನವರ ಮಾನವೀಯ ದೃಷ್ಟಿ ಇಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ.

"ಕೊಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ !
ಕುಲವೇನೊ ಅವಂದಿರ ಕುಲವೇನೋ?
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು"[6]

ಮೇಲು ಕೀಳುಗಳನ್ನು ಜಾತಿಯಿಂದ ನಾವು ಅಳೆಯಬಾರದು. ಯಾರು ಪ್ರಾಣಿಗಳನ್ನು ಕೊಲ್ಲುತ್ತಾರೆಯೋ ಬಾಯಿರುಚಿಗಾಗಿ ಹೊಲಸನ್ನು ಅಂದರೆ ಮದ್ಯಪಾನ, ಮಾಂಸ ಭಕ್ಷಣ ಇವುಗಳನ್ನು ಬಳಕೆ ಮಾಡುತ್ತಾರೋ ಅವರೇ ಕೀಳು. ಶ್ರೇಷ್ಠ ಕುಲದವರೆಂದು ಯಾರನ್ನು ತಿಳಿಯುವುದು? ಸಕಲ ಜೀವಾತ್ಮರಿಗೆ ಲೇಸನ್ನು ಅಂದರೆ ಹಿತವನ್ನು ಬಯಸುವವರೇ ಕುಲೀನರು: ಕೂಡಲ ಸಂಗನ ಶರಣರೇ ಕುಲಜರು. ಸೂತ್ರಪ್ರಾಯವಾದ ಈ ಮಾತು ಸಾರ್ವಕಾಲಿಕವಾದದ್ದು. ಉದಾತ್ತ ಜೀವನಕ್ಕೆ ಕಾರಣವಾಗುವ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದಕ್ಕೆ ಬಸವಣ್ಣನವರು ಅತಿ ಹೆಚ್ಚಿನ ಮಹತ್ವ ಕೊಟ್ಟುದನ್ನು ಇಲ್ಲಿ ಗಮನಿಸಬೇಕು. ಸಮಾನತೆ ಎರಡು ರೀತಿಯಲ್ಲಿ ಸಾಧ್ಯ. ಮೇಲಿದ್ದವರು ಕೆಳಗೆ ಬಿದ್ದರೂ ಒಂದು ರೀತಿ ಸಮಾನತೆ ಆಗುತ್ತದೆ. ಹಾಗೇ ಕೆಳಗಿದ್ದವರು ಮೇಲಕ್ಕೇ ಹೋದರೂ ಸಮಾನತೆ ಸಾಧ್ಯವಾಗುತ್ತದೆ. ಬಸವಣ್ಣನವರು ಬಯಸಿದ್ದು ಮತ್ತು ಸಾಧಿಸಿದ್ದು ಎರಡನೆಯ ರೀತಿಯ ಸಮಾನತೆ ಇದರಿಂದ ದೀನರು ದಲಿತರು ದುಃಖಿಗಳು ಆತ್ಮವಿಶ್ವಾಸವನ್ನು ಪಡೆದು ಉದಾತ್ತ ಜೀವನದಲ್ಲಿ ನಡೆಯುವಂತಾಯಿತು.

"ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ
ಜಲ-ಬಿಂದುವಿನ ವ್ಯವಹಾರ ಒಂದೇ;
ಆಸೆಯಾಮಿಷರೋಷಹರು ವಿಷಯಾದಿಗಳೆಲ್ಲ ಒಂದೆ
ಏನನೋದಿ ಏನ ಕೇಳಿ, ಏನು ಫಲ?
ಕುಲಜನೆಂಬುದಕ್ಕೆ ಆವುದು ದೃಷ್ಯ?
ಸಪ್ತಧಾತುಸಮಂ ಪಿಂಡಂ ಸಮಯೋನಿಸಮುದ್ಭವಂ
ಆತ್ಮ ಜೀವಸಮಾಯುಕ್ತಂ ವರ್ಣಾನಾಕಿಂ ಪ್ರಯೋಜನಂ
ಎಂಬುದಾಗಿ,
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ, ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲಿ ಜನಿಸಿದರುಂಟೆ ಜಗದೊಳಗೆ?
ಇದು ಕಾರಣ ಕೂಡಲಸಂಗಮದೇವಾ
ಲಿಂಗಸ್ಥಲವನರಿದವನೆ ಕುಲಜನು."[7]

ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಮೇಲು ಕೀಳು ಜಾತಿ ವ್ಯವಸ್ಥೆಯನ್ನು ಮೂಲಭೂತವಾಗಿ ಪ್ರಶ್ನಿಸುತ್ತಿದ್ದಾರೆ. ಬಸವಣ್ಣನವರು. ಎಲ್ಲರೂ ಜನಿಸುವುದು ಒಂದೇ ರೀತಿಯಾಗಿ ಮುಟ್ಟುಗಂಡು. ರೇತ ಶುಕ್ಲಗಳ ಸಂಯೋಗವಾದಲ್ಲದೆ ಗರ್ಭ ನಿಲ್ಲುವುದಿಲ್ಲ. ತಾಯಿಯ ಗರ್ಭದಿಂದ ಹುಟ್ಟಿಬಂದ ಮೇಲೆ ಈ ಲೋಕದಲ್ಲಿ ಬೆಳೆಯುವಾಗ ಆಶೆ ಆಮೀಷ, ರೋಷ, ಹರ್ಷ, ವಿಷಯ ಸುಖಾದಿಗಳು ಎಲ್ಲರನ್ನೂ ಸಹಜವಾಗಿಯೇ ಆವರಿಸುತ್ತವೆ. ಏನನೋದಿ ಏನು ಕೇಳಿದರೂ ಇವುಗಳಿಂದ ಬಿಡುಗಡೆಯಿಲ್ಲ. ಹೀಗೆ ಹುಟ್ಟು, ಬೆಳವಣಿಗೆಗೆ ಸಹಜ ಸ್ವಭಾವಗಳೆಲ್ಲಾ ಒಂದೇ ಆಗಿರುವಾಗ ಒಬ್ಬನು ಶ್ರೇಷ್ಠ ಜಾತಿಯವನು. ಇನ್ನೊಬ್ಬನು ಕನಿಷ್ಠ ಜಾತಿಯವನು ಎಂದು ತಾರತಮ್ಯ ಮಾಡಲು ಆಧಾರವೇನು ? ಇದಕ್ಕೆ ಆಧಾರವೇ ಇಲ್ಲವೆಂದು ತಮ್ಮ ಸಮರ್ಥನೆಗಾಗಿ ಒಂದು ಶ್ಲೋಕವನ್ನು ಉದಾಹರಿಸುತ್ತಾರೆ. "ಎಲ್ಲರ ದೇಹವೂ ಸಪ್ತಧಾತುವಿನಿಂದಲೇ ಆಗಿದೆ. ಎಲ್ಲರೂ ಹುಟ್ಟಿಬರುವ ರೀತಿ ಒಂದೇ. ಜೀವಾತ್ಮರಿಂದ ಕೂಡಿದ ಈ ದೇಹಗಳು ಎಲ್ಲರಿಗೂ ಸಮಾನವಾಗಿವೆ. ಹೀಗಿರುವಾಗ ಬ್ರಾಹ್ಮಣ, ಕ್ಷತ್ರಿಯಾದಿ ವರ್ಣ ವ್ಯವಸ್ಥೆಯಿಂದ ಏನು ಪ್ರಯೋಜನ? ಎಂದು ಪ್ರಶ್ನಿಸುತ್ತಿದೆ. ಈ ಶ್ಲೋಕ. ಇದನ್ನು ಸಮರ್ಥಿಸುತ್ತಾ. ಮಾಡುವ ಕೆಲಸಗಳಿಂದ ಜಾತಿ ಕಲ್ಪನೆ ಬೆಳೆದು ಬಂದಿರುವುದನ್ನು ಹೇಳುತ್ತಾರೆ. ಕಬ್ಬಿಣವನ್ನು ಕಾಸಿ ಬಡಿದವನು ಕಮ್ಮಾರನಾದ. ಬಟ್ಟೆಯನ್ನು ಬೀಸಿ ಒಗೆದವನು ಮಡಿವಾಳನಾದ, ಮಗ್ಗವನ್ನು ಹಾಸಿ ನೇದವನ್ನು ನೇಯ್ಗೆಯವನಾದ. ವೇದವನ್ನು ಓದಿದವನು ಬ್ರಾಹ್ಮಣನಾದ. ಇದರಲ್ಲಿ ಯಾರೂ ತಮಗೆ ತಾವೇ ಶ್ರೇಷ್ಠರಲ್ಲ. ಶ್ರೇಷ್ಠತೆ ನಿರ್ಣಯವಾಗುವುದು ಅವರ ಜೀವನ ವಿಧಾನದಿಂದ ಅವರು ಪಡೆಯುವ ಜ್ಞಾನದಿಂದ ಎಂಬುದನ್ನು ಒತ್ತಿ ಹೇಳುತ್ತಾರೆ. ಮುಂದುವರೆದು. ಕಿವಿಯಲ್ಲಿ ಹುಟ್ಟಿದವರಾರೂ ಇಲ್ಲ" ಎನ್ನುವ ಮಾತಿನಿಂದ ಇಡಿ ವೈದಿಕ ನಂಬಿಕೆಯನ್ನು, ಚಾತುರ್ವರ್ಣವನ್ನೇ ಪ್ರಶ್ನಿಸುತ್ತಾರೆ. ಜೊತೆಗೆ ಜಾತಿಯನ್ನು ನಿರಾಕರಿಸುತ್ತಾರೆ. ಇದು ಸಾಮಾಜಿಕ ಪರಿವರ್ತನೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ.

"ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತ್ತೆಂಬರು;
ಕೊಂಬಲ್ಲಿ ಕೊಡುವಲ್ಲಿ ಕುಲವನರಿಸುವರು
ಎಂತಯ್ಯಾ, ಅವರ ಭಕ್ತರೆಂಬೆ?
ಎಂತಯ್ಯಾ ಅವರ ಯುಕ್ತರೆಂಬೆ?
ಕೂಡಲಸಂಗಮದೇವ, ಕೇಳಯ್ಯಾ
ಹೊಲತಿ ಶುದ್ಧನೀರ ಮಿಂದಂತಾಯಿತ್ತಯ್ಯಾ"[8]

ಜಾತಿ ಮತ ಕುಲಗಳನ್ನು ತೊಡೆದು ಹಾಕಿ ಸರ್ವ ಸಮಾನತೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಬಸವಣ್ಣನವರು ಇಷ್ಟಲಿಂಗ ಮಾಧ್ಯವನ್ನು ಬಳಸಿಕೊಂಡರು. ಇದರಿಂದ ಹಿಂದಿನ ಜಾತಿಗಳೆಲ್ಲಾ ಅಳಿದು ಹೋಗುತ್ತವೆಂದು ಆಶಿಸಿದರು. ಆದರೆ ಜಾತಿ ಮತಗಳಲ್ಲೆ ಬೆಳೆದು ಬಂದ ಸಾಮಾಜಿಕ ಪರಿಸರಕ್ಕೆ ಅದು ಅಷ್ಟು ಸುಲಭವಾದ ವಿಷಯವಾಗಿರಲಿಲ್ಲ. ಲಿಂಗವನ್ನು ಪಡೆದ ಮೇಲೂ ಹಿಂದಿನ ಜಾತಿಗಳು ಅವುಗಳ ಮೇಲು ಕೀಳುಗಳು ಉಳಿದೇ ಬಂದವು ಅದನ್ನು ಕಂಡು ನೊಂದು ಬಹುಶಃ ಈ ವಚನವನ್ನು ಹೇಳಿರುವಂತೆ ಕಾಣುತ್ತದೆ.

ಶಿವಭಕ್ತರಾದ ಮೇಲೂ ಒಬ್ಬರಲ್ಲೊಬ್ಬರು ಉಂಡರೆ ಉಟ್ಟರೆ ಆಚಾರ ಕೆಡುತ್ತದೆ, ವಿವಾಹ ಸಂಬಂಧ ಬೆಳೆಸಿದರೆ ಕುಲ ಕೆಡುತ್ತದೆ ಎನ್ನುವುದಾದರೆ ಅವರು ಭಕ್ತರು ಹೇಗಾಗುತ್ತಾರೆ? ಅವರ ಆಚಾರ ಯುಕ್ತವೆಂತಾಗುತ್ತದೆ? ಹೀಗೆ ಹಿಂದಿನ ಜಾತಿಗಳನ್ನೇ ಎಣಿಸುವವರು ಶಿವಭಕ್ತರಂತಾಗಲಿಲ್ಲ ಎಂದು ವಿಷಾದದಿಂದ ಹೇಳುತ್ತಾರೆ. ಇದು ಹೊಲತಿ ಶುದ್ಧನೀರ ಮಿಂದಂತೆ, ಆಕೆಯ ಹೊರಹೊಲಸು ಹೋದೀತೇ ಹೊರತು ಮನದ ಹೊಲೆತನವಲ್ಲ. ಹಾಗೆ ಶಿವಧರ್ಮಜಲದಿ ಮಿಂದ ಅರೆ ಭಕ್ತರ ಬಹಿರಂಗ ಅಂದವಾಯಿತೇ ವಿನಃ ಅಂತರಂಗದ ಜಾತಿ-ಕುಲ-ಕಾಲುಷ್ಯ ತೊಳೆದು ಹೋಗಲಿಲ್ಲ ಎಂದು ಜಾತಿವಾದಿಗಳನ್ನು ಎಚ್ಚರಿಸುತ್ತಿದ್ದಾರೆ. ಕೇವಲ ಬಾಹ್ಯ ಬದಲಾವಣೆಯಂತೆಯೇ ಅಂತರಂಗದ ಪರಿವರ್ತನೆ ಆಗಬೇಕೆಂಬುದು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವಾಗಿದೆ.

"ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ

ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ; ನೋಡಯ್ಯ
ಮಹದಾನಿ ಕೂಡಲಸಂಗಮದೇವಾ
ಮಾದರ ಚೆನ್ನಯ್ಯನ ಮನೆಯ ಮಗನಾನಯ್ಯ"[9]

ಅಂದಿನ ಸಾಮಾಜಿಕ, ಧಾರ್ಮಿಕ ಹಿನ್ನಲೆಯಲ್ಲಿ ಈ ವಚನ ಬಹಳ ದಿಟ್ಟತನದ ವಚನವಾಗಿ ಕಾಣುತ್ತದೆ. ವೇದ ಶಾಸ್ತ್ರ ತರ್ಕ ಆಗಮಗಳೆಲ್ಲವನ್ನು ಇಲ್ಲಿ ನಿರಕರಿಸುತ್ತಾರೆ. ವೇದಗಳಿಗೆ ಕತ್ತಿಯನ್ನು ಹಿಡಿಯುತ್ತೇನೆ, ಶಾಸ್ತ್ರಕ್ಕೆ ಬೇಡಿಯನ್ನು ಹಾಕುತ್ತೇನೆ, ತರ್ಕದ ಬೆನ್ನ ಮೇಲೆ ಬಾರುಕೋಲಿನಿಂದ ಬಾರಿಸುತ್ತೇನೆ; ಆಗಮಗಳ ಮೂಗ ಕೊಯುತ್ತೇನೆ, ಎನ್ನುವಷ್ಟು ಕಠಿಣವಾಗಿ ಹೇಳುವ ಈ ಪ್ರತಿಭಟನೆಯ ಹಿಂದಿರುವ ಆಶಯವನ್ನು ಗಮನಿಸಬೇಕು. "ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ" – ಎಂಬ ಮಾತಿನಲ್ಲಿ ಅದು ವ್ಯಕ್ತವಾಗುತ್ತದೆ. ವೇದ ಶಾಸ್ತ್ರಾದಿಗಳನ್ನು ನಮ್ಮ ಬುದ್ಧಿವಂತ ಜನ ಜಾತಿ ವ್ಯವಸ್ಥೆಯನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಆ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯ ಧ್ವನಿಯೆತ್ತುವುದೇ ಬಸವಣ್ಣನವರ ಆಶಯ. ವೇದಶಾಸ್ತ್ರಾದಿಗಳ ವರ್ಣ ವ್ಯವಸ್ಥೆಯನ್ನು ಎತ್ತಿ ಹಿಡಿದು ಸಾಮಾಜಿಕ ವಿಷಮತೆಯನ್ನು ಪ್ರತಿಪಾದಿಸುವ ಸಾಧನಗಳಾದರೆ ಅವುಗಳನ್ನು ನಿರ್ದಾಕ್ಷಿಣ್ಯವಗಿ ಕಿತ್ತು ಹಾಕಬೇಕೆನ್ನುವುದೇ ಇಲ್ಲಿನ ಕಟುಮಾತುಗಳ ಹಿಂದಿರುವ ಉದ್ದೇಶ. ತಾವು ಬ್ರಾಹ್ಮಣರೆನ್ನುವುದನ್ನು ನಿರಾಕರಿಸಿ ಅಸ್ಪೃಶ್ಯರೊಡನೆ ತಮ್ಮನ್ನು ಸಮ್ಮಿಕರಿಸಿಕೊಳ್ಳುತ್ತಾರೆ. ಮಾನವೀಯತೆಗಾಗಿ ಮಿಡಿಯುವ ಇಂತಹ ಅನೇಕ ವಚನಗಳನ್ನು ಬಸವಣ್ಣನವರಲ್ಲಿ ಕಾಣಬಹುದು. ನಾನು ಈ ಲೇಖನದಲ್ಲಿ ಕೇವಲ ಒಂಬತ್ತು ವಚನಗಳನ್ನು ಮಾತ್ರ ಉಲ್ಲೇಖ ಮಾಡಿದ್ದೇನೆ. ಅದರ ಒಟ್ಟು ವಚನಗಳ ಸಂಖ್ಯೆ 1426. ಬಸವಣ್ಣನವರ ವಚನ ಸಂಪುಟ ಸಂ. ಡಾ.ಎಂ.ಎಂ. ಕಲಬುರ್ಗಿ ಅವರು ಸಂಪಾದನೆ ಮಾಡಿದ ಗ್ರಂಥದ ಉಲ್ಲೇಖದಂತೆ. ಬಸವಣ್ಣನವರ ವಚನಗಳು ಸಾಮಾಜಿಕ ಪರಿವರ್ತನೆವಿಲ್ಲದೆ, ಜೀವನ ಮೌಲ್ಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನೊಳಗೊಂಡಂತೆ ಪರಿವರ್ತನೆಯನ್ನು ತರುವಂತ ವಚನಗಳಾಗಿವೆ. ಬದುಕಿನ ವಾಸ್ತವತೆ, ಮಾನವ ಪ್ರೇಮದ ಸಾಧ್ಯತೆಗಳ ಕುರಿತು ಬಸವಣ್ಣನವರ ವಚನಗಳ ಧ್ಯೇಯವಾಗಿದೆ. ಬುದ್ಧನ ವಿಚಾರಗಳು ಹಾಗೂ ಬಸವಣ್ಣನವರ ವಿಚಾರಗಳಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಪರಿವರ್ತನೆಯ ವಿಚಾರದಲ್ಲಿ ಒಂದೇ ಮಾರ್ಗದಲ್ಲಿ ಸಾಗುವಂತಹವುಗಳಾಗಿವೆ.

**ಅಡಿ ಟಿಪ್ಪಣೆಗಳು**

1. ಪುಟ 143, ಬಸವಣ್ಣನವರ ವಚನ ಸಂಪುಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
2. ಪುಟ 142, ಬಸವಣ್ಣನವರ ವಚನ ಸಂಪುಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
3. ಪುಟ 143, ಬಸವಣ್ಣನವರ ವಚನ ಸಂಪುಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
4. ಪುಟ 144, ಬಸವಣ್ಣನವರ ವಚನ ಸಂಪುಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
5. ಪುಟ 147, ಬಸವಣ್ಣನವರ ವಚನ ಸಂಪುಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
6. ಪುಟ 148, ಬಸವಣ್ಣನವರ ವಚನ ಸಂಪುಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
7. ಪುಟ 147, ಬಸವಣ್ಣನವರ ವಚನ ಸಂಪುಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
8. ಪುಟ 158, ಬಸವಣ್ಣನವರ ವಚನ ಸಂಪುಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
9. ಪುಟ 180, ಬಸವಣ್ಣನವರ ವಚನ ಸಂಪುಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

**ಆಕರ ಗ್ರಂಥಗಳು**

1. ಬಸವಣ್ಣನವರ ವಚನ ಸಂಪುಟ– ಸಂ. ಡಾ. ಎಂ.ಎಂ. ಕಲಬುರ್ಗಿ 1993.
2. ವಚನ ಪರಿಭಷಾ ಕೋಶ–ಸಮಗ್ರ ವಚನ ಸಂಪುಟ–15–ಡಾ. ಎಸ್. ವಿದ್ಯಾಶಂಕರ–1993
3. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–3 ಸಂ. ಜಿ.ಎಸ್. ಶಿವರುದ್ರಪ್ಪ.
4. ಬಸವೇಶ್ವರ ವಚನ ದೀಪಿಕೆ–ಡಾ. ಎಚ್. ತಿಪ್ಪೇರುದ್ರಸ್ವಾಮಿ.
5. ಪುರಾಣನಾಮ ಚೂಡಾಮಣಿ–ಸಂ. ಬೆನಗಲ ರಾಮರಾವ್ ಹಾಗೂ ಪಾನ್ಯಂ ಸುಂದರಶಾಸ್ತ್ರಿ.